# ಎನ್‌ಐಟಿಕೆಯಲ್ಲಿ ರಾಷ್ಟ್ರೀಯ ಏಕತಾ ದಿನ

ಸಂ. ಕ. ಸಮಾಚಾರ, ಮಂಗಳೂರು

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 147ನೇ ಜನ್ಮದಿನದ ಅಂಗವಾಗಿ ಸುರತ್ಕಲ್ ಎನ್‌ಐಟಿಕೆಯಲ್ಲಿ ಇಂದು ಏಕತೆಗಾಗಿ ಓಟ ನಡೆಯಿತು.

ನಿರ್ದೇಶಕ (ಪ್ರಭಾರ) ಪ್ರೊ.ಜಿ.ಸಿ ಮೋಹನ್ ಕುಮಾರ್, ರಿಜಿಸ್ಟ್ರಾರ್ (ರವೀಂದ್ರನಾಥ್, ಡೀನ್ ವಿದ್ಯಾರ್ಥಿ ಕಲ್ಯಾಣ ಪ್ರೊ. ನರೇಂದ್ರನಾಥ್, ಎನ್‌ಸಿಸಿ ಅಧಿಕಾರಿಗಳು ಮತ್ತು ಕೆಡೆಟ್‌ಗಳು, ಎನ್‌ಎಸ್‌ಎಸ್ ಅಧಿಕಾರಿಗಳು ಮತ್ತು ಸ್ವಯಂಸೇವಕರು, ಬೋಧನೆ ಮತ್ತು ಬೋಧಕೇತರರೊಂದಿಗೆ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು 6 ಕಿ.ಮೀ.ಗೂ ಹೆಚ್ಚು ದೂರದ ಏಕತಾ ಓಟದಲ್ಲಿ ಭಾಗವಹಿಸಿದ್ದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ದೇಶಕ್ಕೆ ನೀಡಿದ ಕೊಡುಗೆಗಳ ಕುರಿತು ಪ್ರದರ್ಶನ ಎನ್‌ಐಟಿಕೆ ವಜ್ರಮಹೋತ್ಸವದ ಪ್ರದರ್ಶನ ಸಭಾಂಗಣದಲ್ಲಿ ನಡೆಯಿತು.




ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ಅಂಗವಾಗಿ ಏಕತಾ ದಿನ ಆಚರಿಸಲಾಯಿತು.

Samuyatha kanataka, Date: 1//1122 , p, 09